OS No. 39/2017

DW-1

**(ಇಂದು ದಿಃ 06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ.NR ವಕೀಲರಿಂದಃ-**

1ನೇ ಪ್ರತಿವಾದಿ ನನ್ನ ತಂದೆಯ ತಂದೆ. 1ನೇ ಪ್ರತಿವಾದಿ ಕಾಂಗ್ರೇಶ ನಾಯಕರು ಆಗಿದ್ದರು ಎಂದರೆ ಕಾಂಗ್ರೇಶನಲ್ಲಿ ಓಡಾಡುತ್ತಿದ್ದರು ಎಂದು ಹೇಳುತ್ತಾರೆ. 1ನೇ ಪ್ರತಿವಾದಿ ಬಿಜೀನೆಷ ಮಾಡುತ್ತಿದ್ದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವ್ಯವಸಾಯ ಮಾಡುತ್ತಿದ್ದರು ಮತ್ತು ಸಣ್ಣ ಕಿರಾಣಿ ಅಂಗಡಿ ಇಟ್ಟುಕೊಂಡಿದ್ದರು ಎಂದು ಹೇಳುತ್ತಾರೆ. 1ನೇ ಪ್ರತಿವಾದಿಗೆ ಹಿರಿಯರಿಂದ ಯಾವುದೇ ಜಮೀನು ಬಂದಿರಲಿಲ್ಲ, 1ನೇ ಪ್ರತಿವಾದಿ ಯಾವ ಆಧಾಯದಿಂದ ಆಸ್ತಿಗಳನ್ನು ಸಂಪಾಧನೆ ಮಾಡಿದರು ನನಗೆ ಗೊತ್ತಿಲ್ಲ, ಈ ದಾವಾ ಸ್ವತ್ತುನ್ನು 1ನೇ ಪ್ರತಿವಾದಿ ಖರೀದಿ ಮಾಡಲು ಹಣ ಎಲ್ಲಿಂದ ತಂದಿದ್ದರು ನನಗೆ ಗೊತ್ತಿಲ್ಲ . ಸಾಕ್ಷಿ ಮುಂದುವರೆದು ಸದರಿ ಜಮೀನನ್ನು 20,000/- ತೆಗೆದುಕೊಂಡಿರುವುದಾಗಿ 1ನೇ ಪ್ರತಿವಾದಿ ನನಗೆ ಹೇಳಿದ್ದರು ಎಂದು ಹೇಳುತ್ತಾರೆ. ದಾವಾ ಸ್ವತ್ತು ಮುಂಚೆ ಬಸಪ್ಪ ತಂದೆ ಯಂಕಪ್ಪ ರವರಿಗೆ ಸೇರಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸಣ್ಣ ನರಸರಡ್ಡಿಗೆ ಸೇರಿತ್ತು ಎಂದು ಹೇಳುತ್ತಾರೆ. ಬಸಪ್ಪ ನ ತಂಗಿ ಅಲಿಲ್ಲಮ್ಮ @ಅಂಜಲಮ್ಮ ಸದರಿ ಆಸ್ತಿಯಲ್ಲಿ ಇಸೆದಾರಳು ಆಗಿದ್ದಳು ಎಂದರೆ ನನಗೆ ಗೊತ್ತಿಲ್ಲ, ಬಸಪ್ಪ ನ ಆಸ್ತಿಯಲ್ಲಿ ವಿಭಾಗ ಆದಾಗ ಸರ್ವೇ ನಂಬರ 119 ರ ಪೂರ್ತಿ ಜಮೀನು ಸರ್ವೇ ನಂಬರ 121 ರಲ್ಲಿಯ ಅರ್ಧ ಜಮೀನು ಅಂಜಲಮ್ಮ ಭಾಗಕ್ಕೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ, ಅಂಜಲಮ್ಮನ ಭಾಗಕ್ಕೆ ಬಂದ ಮೇಲಿನ ಜಮೀನುಗಳು ಅವಳ ಮಕ್ಕಳಾದ ದೊಡ್ಡ ನರಸರಡ್ಡಿ ಮತ್ತು ಸಣ್ಣ ನರಸರಡ್ಡಿ ರವರ ಹೆಸರಿಗೆ ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ, ಸಣ್ಣ ನರಸರಡ್ಡಿ ಮದುವೆ ಇಲ್ಲದೆ ತೀರಿ ಹೋಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಕಾರಣ ಸರ್ವೇ ನಂಬರ 119 ರ ಪೂರ್ತಿ ಜಮೀನು

ಮತ್ತು ಸರ್ವೇ ನಂಬರ 121 ರಲ್ಲಿನ ಅರ್ಧ ಜಮೀನಿಗೆ ದೊಡ್ಡ ನರಸರಡ್ಡಿ ಒಬ್ಬನೇ ಮಾಲೀಕರಾದರು ಎಂದರೆ ನನಗೆ ಗೊತ್ತಿಲ್ಲ, ದೊಡ್ಡ ನರಸರಡ್ಡಿಗೆ ಗೊತ್ತಾಗದ ರೀತಿಯಲ್ಲಿ 1ನೇ ಪ್ರತಿವಾದಿ ಸರ್ವೇ ನಂಬರ 121 ಮತ್ತು 119 ರಲ್ಲಿ ತನ್ನ ಹೆಸರು ಸೇರಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ,

1ನೇ ಪ್ರತಿವಾದಿ ಪೆದ್ದ ನರಸರಡ್ಡಿಗೆ ಆತ್ಮೀಯರಾಗಿದ್ದರು ಮತ್ತು ಪೆದ್ದ ನರಸರಡ್ಡಿಯ ಎಲ್ಲಾ ವ್ಯವಹಾರಗಳನ್ನು ತಾವೇ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ, ನನ್ನ ಅಜ್ಜಿ ತಾತ ಜೊತೆಯಲ್ಲಿ ವಾಸವಿದ್ದರು. ನನ್ನ ಅಜ್ಜಿ ಭಾಗಕ್ಕೆ ಜಮೀನು ಬಂದಿದೆ ಎಂದು ದಾಖಲಾತಿ ಸೃಷ್ಟಿ ಮಾಡುವ ಉದ್ದೇಷ ದಿಂದ 1ಂನೇ ಪ್ರತಿವಾದಿ ಅವಳ ಹೆಸರಿಗೆ ಜಮೀನು ಮಾಡಿಸಿದ್ದರು ಎಂದರೆ ಸರಿಯಲ್ಲ, ಅವಳು ತೀರಿ ಹೋದ ನಂತರ ಮತ್ತೇ ಸದರಿ ಜಮೀನನ್ನು ತನ್ನ ಹೆಸರಿಗೆ ಮಾಡಿಕೊಂಡ ಎಂದರೆ ಸರಿ. ತದಾನಂತರ 1ನೇ ಪ್ರತಿವಾದಿ ನಮ್ಮ ಪರವಾಗಿ ರಿಲೀಜ್ ಡೀಡ್ ಸೃಷ್ಟಿ ಮಾಡಿದರು ಎಂದರೆ ಸರಿಯಲ್ಲ .ಸಾಕ್ಷಿ ಮುಂದುವರೆದು ರಿಲೀಜ್ ಡೀಡ್ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. 1ನೇ ಪ್ರತಿವಾದಿ ಜಮೀನು ಖರೀದಿ ಮಾಡಿದ್ದಾರೆ ಎಂದು ಖರೀದಿ ಪತ್ರವನ್ನು ಸುಳ್ಳು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ.

1ನೇ ವಾದಿ ತಂದೆ ನರಸರಡ್ಡಿಗೆ ಕನ್ನಡ ಓದಲು ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ, 1ನೇ ಪ್ರತಿವಾದಿ ವಾದಿಯರಿಗೆ ಗೊತ್ತಾಗದ ರೀತಿಯಲ್ಲಿ ದಾಖಲಾತಿಗಳಲ್ಲಿ ತನ್ನ ಹೆಸರು ಸೇರಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ, ನರಸರಡ್ಡಿ ಮತ್ತು ಅವರ ಹೆಂಡತಿ ಜೊತೆಯಾಗಿದ್ದರು ಅಥವಾ ಬೇರೆ ಇದ್ದರು ನನಗೆ ಗೊತ್ತಿಲ್ಲ, ಅವರಿಬ್ಬರು ಗಂಡ ಹೆಂಡತಿ ಬೇರೆಯಾಗಿದ್ದಾರೆ ಎಂದು 1ನೇ ಪ್ರತಿವಾದಿ ದಾಖಲಾತಿ ಸೃಷ್ಟಿ ಮಾಡಿ ಮುಟೇಷನ್

ಮಾಡಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳನ್ನು ಎಲ್ಲಾ ವಿಷಯ ವಾದಿಯರಿಗೆ ಗೊತ್ತು ಎಂದು ತೋರಿಸುವ ಸಲುವಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ವಾದಿಯರ ಉಳಿದ ಜಮೀನು ಇದೆ ಎಂದರೆ ಸರಿ. ದಾವಾ ಜಮೀನು ಮತ್ತು ಉತ್ತರದಲ್ಲಿರುವ ಜಮೀನಿನ ನಡುವೆ ಬಾಂದಾರ ಇರಲಿಲ್ಲ ಎಂದರೆ ಸರಿಯಲ್ಲ. 4 ವರ್ಷಗಳ ಹಿಂದೆ ಪೊಲೀಸರ ಸಹಾಯದಿಂದ ಒತ್ತಾಯಪೂರವಕವಾಗಿ ಎರಡು ಜಮೀನುಗಳ ನಡುವೆ ಬಾಂದಾರ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ಡೋಜರ್ ನಿಂದ ಬಾಂದಾರ ಹಾಕಿಸಿದ್ದು ಇವತ್ತಿಗೂ ಕಾಣುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರ119 ರ ಎಲ್ಲಾ ಕಡೆ ಹಳೆಯ ಬಾಂದಾರ ಇದ್ದು ದಾವ ಆಸ್ತಿ ಮತ್ತು ವಾದಿಗಳ ಉಳಿದ ಜಮೀನಿನ ನಡುವೆ ಇರುವ ಬಾಂದಾರ ಮಾತ್ರ 4 ವರ್ಷಗಳ ಹಿಂದೆ ಹಾಕಿದ ಹೊಸ ಬಾಂದಾರ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿ ನೀರು ಹೋಗದಂತೆ ಒಡ್ಡನ್ನು ವಾದಿಯರ ಹಿರಿಯರು ತುಂಬಾ ವರ್ಷಗಳ ಹಿಂದೆ ಹಾಕಿದ್ದು ಇದೆ ಎಂದು ಹೇಳುತ್ತಾರೆ. ಮಣ್ಣಿನಿಂದ ಹಾಕಿದ ಒಡ್ಡು ಹುಲ್ಲು ಇಲ್ಲದೇ ಒದರೆ ಮಳೆ ನೀರಿಗೆ ಕೊಚ್ಚಿ ಕೊಂಡು ಹೋಗಿ ಸಮತಟ್ಟಾಗುತ್ತದೆ ಎಂದರೆ ಸರಿಯಲ್ಲ. ಬಾಂದಾರ ಮೇಲೆ ಇರುವ ಹುಲ್ಲು ನೋಡಿ ಹಳೆಯ ಬಾಂದಾ ರ ಮತ್ತು ಹೊಸ ಬಾಂದಾರ ಎಂದು ಗುರುತಿಸಬಹುದು ಎಂದರೆ ನನಗೆ ಗೊತ್ತಿಲ್ಲ.

ಇವತ್ತಿಗೂ ದಾವಾ ಸ್ವತ್ತಿನಲ್ಲಿ ವಾದಿಯರು ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. 1ನೇ ವಾದಿ ತಂದೆ ನರಸರಡ್ಡಿಗೆ ನನ್ನ ತಾತ ಜಮೀನನ್ನು ಅವರ ಹೆಸರಿಗೆ ಮಾಡಿಕೊಂಡ ಸಂಗತಿ ಗೊತ್ತಾದ ಮೇಲೆ ನರಸರಡ್ಡಿ AC ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿದ್ದರು ಎಂದರೆ ಸರಿ. ಅದು ವಜಾ ಆಯಿತು ಎಂದರೆ ಸರಿ. ಅದನ್ನು ಪ್ರಶ್ನಿಸಿ ಡಿ.ಸಿ. ಮುಂದೆ ರಿವೀಜನ್ ಸಲ್ಲಿಸಿದ್ದರು

OS No. 39/2017
DW-1

ಎಂದರೆ ನನಗೆ ಗೊತ್ತಿಲ್ಲ, AC ಅಫೀಸ್ ನಲ್ಲಿ ವಿಚಾರಣೆ ನಡೆಯುವಾಗ ದಿನಾಂಕ 12.08.2014 ರಂದು ನಾವು ಜಮೀನು ಮಾಲೀಕರು ಎಂದು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದು ವಾದಿಯರಿಗೆ ಮೊದಲ ಬಾರಿ ಗೊತ್ತಾಯಿತು ಎಂದರೆ ಸರಿಯಲ್ಲ, AC ಕಚೇರಿಯಲ್ಲಿ 1ನೇ ಪ್ರತಿವಾದಿ ನೋಂದಣಿ ಇಲ್ಲದ ಖರೀದಿ ಪತ್ರದ ಪ್ರಕಾರ ಖರೀದಿ ಮಾಡಿದ್ದಾರೆ ಎಂದು ಹೇಳಿದ್ದೇವು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಖರೀದಿ ಪತ್ರ ನೋಂದಣಿ ಆಗಿದೆ ಎಂದು ಹೇಳುತ್ತಾರೆ. ನೋಂದಣಿ ಆಗಿರುವ ಖರೀದಿ ಪತ್ರವನ್ನು ಹಾಜರುಪಡಿಸಿಲ್ಲ, ದಿನಾಂಕ 01.08.2017 ರಂದು ನಾನು ದಾವ ಸ್ವತ್ತಿಗೂ ಹೋಗಿ ವಾದಿಯರನ್ನು ದಾವಾ ಸ್ವತ್ತಿನಿಂದ ಹೊರ ಹಾಕಲು ಪ್ರಯತ್ನ ಪಟ್ಟೆ ಮತ್ತು ಗಲಾಟೆ ಮಾಡಿದೆ ಎಂದರೆ ಸರಿಯಲ್ಲ,

ಸಣ್ಣ ನರಸರಡ್ಡಿ ಆತನ ಭಾಗದ ಜಮೀನನ್ನು 20,000/- ರೂಪಾಯಿಗಳಿಗೆ 1ನೇ ಪ್ರತಿವಾದಿಗೆ ಖರೀದಿ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸಣ್ಣ ನರಸರಡ್ಡಿ ಖರೀದಿ ಪತ್ರ ಬರೆದುಕೊಟ್ಟು 1ನೇ ಪ್ರತಿವಾದಿಗೆ ಕಬ್ಜಾ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾವು ಯಾವತ್ತು ದಾವಾ ಸ್ವತ್ತಿನ ಮೇಲೆ ಕಬ್ಜಾ ಇಲ್ಲ ಎಂದರೆ ಸರಿಯಲ್ಲ,

**(ವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

OS No. 39/2017

DW-1

**ಸೇಡಂ.**